# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.53/2025

Pw-04

Cw-04

ಸಾಕ್ಷಿದಾರರ ಹೆಸರುಃ ಶ್ರೀ ಗೋವಿಂದಪ್ಪ ತಳವಾರ

ತಂದೆಃಗಂಡನ ಹೆಸರುಃ ಶ್ರೀ ರಾಮಪ್ಪ

ವಯಸ್ಸುಃ 38 ವರ್ಷ

ಉದ್ಯೋಗಃ ಕೂಲಿ

ವಾಸ ಸ್ಥಳಃ ವೈ.ಟಿ ಹೊನ್ನತ್ತಿ, ತಾಃ ರಾಣೇಬೆನ್ನೂರು

**ದಿನಾಂಕ:03.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ಈ ಕೇಸಿನ ಪಿರ್ಯಾದಿ ಗೊತ್ತು. ಈ ಕೇಸಿನ ಆರೋಪಿತರು ಸಹ ನನಗೆ ಗೊತ್ತು. ಅವರೆಲ್ಲರೂ ನಮ್ಮೂರಿನವರು. ನಾನು ಹಿಂದೂ ವಾಲ್ಮೀಕಿ ಜಾತಿಗೆ ಸೇರಿರುತ್ತೇನೆ. ಆರೋಪಿತರು ಹಿಂದು ಲಿಂಗವಂತ ಜಾತಿಗೆ ಸೇರಿರುತ್ತಾರೆ. ದಿನಾಂಕಃ20.06.2025 ರಂದು ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ಗ್ರಾಮ ಪಂಚಾಯತಿಯ ಪಿಡಿಒ ಮತ್ತು ಗುತ್ತಿಗೆದಾರರು ಸೇರಿಕೊಂಡು ಪಂಚಾಯತಿ ಜಾಗವನ್ನು ಲೈನ್ ಔಟ್ ಮಾಡುತ್ತಿದ್ದರು. ಸದರಿ ಕೆಲಸಕ್ಕೆ ನಾನು, ಚಾಸಾ-1 ಮತ್ತು ಚಾಸಾ-5 ರವರು ಸೇರಿಕೊಂಡು ಸಹಾಯಮಾಡಲು ಸದರಿ ಜಾಗಕ್ಕೆ ಹೋಗಿದ್ದೆವು.

2. ಆ ರೀತಿ ಪಂಚಾಯತಿ ಜಾಗದಲ್ಲಿ ಲೈನ್ ಔಟ್ ಮಾಡುವಾಗ ಆರೋಪಿತರಿಗೂ ಮತ್ತು ಪಿಡಿಒ ರವರಿಗೆ ಜಗಳ ಆಯಿತು. ನಾನು, ಚಾಸಾ-1 ಮತ್ತು 5 ರವರು ಪಂಚಾಯತಿ ಜಾಗದ ಲೈನ್ ಔಟ್ ಮುಗಿಸಿಕೊಂಡು ಮಧ್ಯಾಹ್ನ 2.00 ಗಂಟೆಗೆ ಕುಳಿತಿದ್ದೆವು. ಆಗ ಆರೋಪಿತರೆಲ್ಲರೂ ಅಲ್ಲಿಗೆ ಒಟ್ಟಿಗೆ ಬಂದು ಈ ಜಾಗ ನಿಮ್ಮಪ್ಪನದೇ, ಇಲ್ಲಿ ಯಾಕೆ ಕಾಲಿಡುತ್ತೀರಿ ವಾಲ್ಮೀಕಿ ಜಾತಿ ಸೂಳೇ ಮಕ್ಕಳಾ, ಈ ಊರಲ್ಲಿ ನಿಮ್ಮ 20 ಕುಟುಂಬ ಅಷ್ಟೇ ಇರುತ್ತವೆ, ನೀವ್ಯಾಕೆ ಇಷ್ಟು ಮುಂದುವರೆದು ಈಗ ಕೆಲಸಕ್ಕೆ ಬಂದೀರಿ ಎಂದು ಬೈದು, ನನಗೂ

ಮತ್ತು ಪಿರ್ಯಾದಿಗೆ ಹಾಗೂ ಚಂದ್ರಪ್ಪನಿಗೆ ಕೈಗಳಿಂದ ಹೊಡೆದು, ದೂಡಾಡಿದರು. ಆಗ ಗುಡ್ಡಪ್ಪನು ಕೆಳಗೆ ಬಿದ್ದನು. ಆರೋಪಿತರು ನನ್ನ ಎದೆಗೆ ಮತ್ತು ಮೈ ಕೈಗೆ ಹೊಡೆದು ಕೆಳಗೆ ಬೀಳಿಸಿರುತ್ತಾರೆ.

3. ಆರೋಪಿತರು ಚಾಸಾ-5 ರವರಿಗೂ ಸಹ ಕೈಯಿಂದ ಮೈ ಕೈಗೆ ಹೊಡೆದು, ಸಾರ್ವಜನಿಕವಾಗಿ ನಮ್ಮ ಜಾತಿ ಹೆಸರು ಹಿಡಿದು ಬೈದು, ಜಾತಿ ನಿಂದನೆ ಮಾಡಿರುತ್ತಾರೆ. ಆರೋಪಿತರು ನಮ್ಮನ್ನು ಕುರಿತು ನಿಮ್ಮನ್ನು ಇದೇ ರೀತಿ ಬಂದರೆ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದರು. ಆರೋಪಿತರು ನಮಗೆ ಹೊಡಿ-ಬಡಿ ಮಾಡಿದ್ದರಿಂದ ನಮಗೆ ಗಾಯಗಳಾಗಿದ್ದು, ರಾಣೇಬೆನ್ನೂರು ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿರುತ್ತೇವೆ. ಸಾರ್ವಜನಿಕ ಆಸ್ಪತ್ರೆಯವರು ಪೊಲೀಸರಿಗೆ ಮಾಹಿತಿಯನ್ನು ನೀಡಿರುತ್ತಾರೆ. ನಂತರ ಗುಡ್ಡಪ್ಪನು ಪೊಲೀಸ್ ಠಾಣೆಗೆ ಹೋಗಿ ಆರೋಪಿಗಳ ವಿರುದ್ಧ ದೂರನ್ನು ಕೊಟ್ಟಿರುತ್ತಾರೆ. ಈ ಪ್ರಕರಣದ ವಿಚಾರವಾಗಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

**ಪಾಟೀ ಸವಾಲುಃ 1 ರಿಂದ 6 ನೇ ಆರೋಪಿತರ ಪರವಾಗಿ ಶ್ರೀ ಎನ್.ಜಿ.ಹೆಚ್ ವಕೀಲರಿಂದಃ**

4. ಆರೋಪಿತರು ಮತ್ತು ಪಿಡಿಒ ರವರ ನಡುವೆ ಜಗಳ ಆದಾಗ ಮಧ್ಯಾಹ್ನ 12.00 ಗಂಟೆಯಾಗಿತ್ತು. ಜಗಳ ಆದ ಮೇಲೆ ಪಿಡಿಒ ರವರು ಪೊಲೀಸ್ ಠಾಣೆಗೆ ಹೋಗಿ ಆರೋಪಿತರ ವಿರುದ್ಧ ದೂರನ್ನು ಕೊಡಲಿಲ್ಲ. ಅದೇ ರೀತಿ ಗುತ್ತಿಗೆದಾರರು ಆರೋಪಿತರ ವಿರುದ್ಧ ದೂರು ಕೊಟ್ಟ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಆರೋಪಿಗಳು ನನಗೆ ಕೈಗಳಿಂದ ಎದೆಗೆ ಹೊಡೆದು ಒಳಪೆಟ್ಟು ಮಾಡಿರುತ್ತಾರೆ. ನಾನು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಳ್ಳುವಾಗ ವೈದ್ಯರ ಮುಂದೆ ನನಗೆ ಎಲ್ಲೆಲ್ಲಿ ಪೆಟ್ಟುಗಳಾಗಿರುತ್ತವೆ ಎಂದು ತಿಳಿಸಿರುತ್ತೇನೆ. ನಾವು ದವಾಖಾನೆಗೆ ಹೋದಾಗ ಎಷ್ಟು ಗಂಟೆಯಾಗಿತ್ತು ಎಂದು ನನಗೆ ಈಗ ಗೊತ್ತಿಲ್ಲ. ನಾನು, ಚಾಸಾ-1 ಮತ್ತು 5 ರವರು ಆಸ್ಪತ್ರೆಯಲ್ಲಿ ಒಂದು ದಿನ ದಾಖಲಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇವೆ.

5. ಪಂಚಾಯತಿ ಜಾಗಕ್ಕೂ ನಾವು ಕುಳಿತುಕೊಂಡಿದ್ದ ಕಟ್ಟೆಗೂ ಅಂದಾಜು 3-4 ಅಡಿ ಅಂತರ ಇತ್ತು. ನಾನು ಇದೇ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ಆರೋಪಿತರು

ನಮಗೆ ಸಾರ್ವಜನಿಕವಾಗಿ ಜಾತಿ ಹೆಸರು ಹಿಡಿದು ಬೈದು ಜಾತಿ ನಿಂದನೆ ಮಾಡಿದರು ಎಂದು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಿನಾಂಕಃ20.06.2025 ರಂದು ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ–1 ಮತ್ತು 5 ರವರು ಸೇರಿಕೊಂಡು ಆರೋಪಿಗಳಿಗೆ ಹಲ್ಲೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಪ್ರಕರಣದಿಂದ ನುಣಿಚಿಕೊಳ್ಳಲು ಆರೋಪಿಗಳ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

6. ನಾನು ಹೇಳುವ ಪ್ರಕಾರ ಆರೋಪಿತರು ಯಾರಿಗೂ ಸಹ ಬೈದಿಲ್ಲ, ಹೊಡಿ–ಬಡಿ ಮಾಡಿಲ್ಲ ಮತ್ತು ಜಾತಿ ನಿಂದನೆ ಮಾಡಿಲ್ಲ ಹಾಗೂ ಪ್ರಾಣ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ನಾನು, ಚಾಸಾ–1 ಮತ್ತು 5 ರವರು ಸೇರಿಕೊಂಡು ಆರೋಪಿತರಿಗೆ ಕೈಗಳಿಂದ ಹಲ್ಲೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಡಿವೈಎಸ್ಪಿರವರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಪೊಲೀಸರು ನನ್ನ ಹೇಳಿಕೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳು ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ಪಿರ್ಯಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.